**ಎಂ ವಿ ಸಿ ನಂ. 801/24**
**ಪಿ ಡಬ್ಲ್ಯೂ: 1**

**ದಿ: 24-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

**ಪಾಟೀ ಸವಾಲು: 4 ನೇ ಎದುರುದಾರರ ಪರ ಶ್ರೀ ಎನ್ ಎಂ ಬಿ ವಕೀಲರಿಂದ**

ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ಅಪಘಾತವು ಲಾರಿ ತಪ್ಪಿನಿಂದ ಆಗಿರುತ್ತದೆ. ನಾನು ಹುಬ್ಬಳ್ಳಿಗೆ ಟೆಂಪೂದಲ್ಲಿ ಹೋಗುವಾಗ ಅಪಘಾತ ಆಗಿರುವುದನ್ನು ನೋಡಿ ನನ್ನ ಹೆಂಡತಿಗೆ ಅಪಘಾತವಾಗಿದೆ ಎಂದು ತಿಳಿದುಬಂದಿರುತ್ತದೆ. ನಾನು ಮೃತಳ ವಾರಸುದಾರ ಎನ್ನುವ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ನನ್ನ ಹೆಂಡತಿ ಪ್ರಯಾಣಿಸುತ್ತಿದ್ದ ವಾಹನ ಸರಕು ಸಾಗಾಣಿಕೆ ವಾಹನ ಎಂದರೆ ಸಾಕ್ಷಿ ಪ್ರಯಾಣಿಕರನ್ನು ಸಹ ಸಾಗಿಸುತ್ತಿದ್ದರು ಅನ್ನುತ್ತಾರೆ. ಪ್ರಯಾಣಿಕರನ್ನು ಸಾಗಾಣಿಕೆ ಮಾಡುವ ವಾಹನದಲ್ಲಿ ಕುಳಿತುಕೊಳ್ಳಲು ಆಸನದ ವ್ಯವಸ್ಥ ಇರುತ್ತವೆ ಅಂದರೆ ನಿಜ. ಟಾಟಾಏಸ್ ವಾಹನದಲ್ಲಿ ಪ್ರಯಾಣಿಕರು ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಇರಲಿಲ್ಲ ಅಂದರೆ ನಿಜ. ಅಪಘಾತವಾದ ಸಮಯದಲ್ಲಿ ಟಾಟಾಏಸ್ ವಾಹನದಲ್ಲಿ 18 ಜನರು ಪ್ರಯಾಣಿಸುತ್ತಿದ್ದರು. ಸದರಿ ವಾಹನದಲ್ಲಿ ಪ್ರಯಾಣಿಕರನ್ನು ಸಾಗಾಣಿಕೆ ಮಾಡಲು ಅವಕಾಶ ಇರಲಿಲ್ಲ ಅಂದರೆ ಸರಿಯಲ್ಲ.

ನನ್ನ ಹೆಂಡತಿ ಟಾಟಾಏಸ್ ವಾಹನದಲ್ಲಿ ಅನಧಿಕೃತವಾಗಿ ಪ್ರಯಾಣಿಸುತ್ತಿದ್ದರು ಅಂದರೆ ನಿಜ. ಅಪಘಾತದಲ್ಲಿ ಮತ್ತೊಂದು ಮೋಟರ ಸೈಕಲ ಭಾಗಿಯಾಗಿದ್ದು ಅದರ ಮಾಲೀಕರು ಹಾಗೂ ವಿಮೆದಾರರನ್ನು ಪಕ್ಷಗಾರರನ್ನಾಗಿ ಮಾಡಲು ಯಾವುದೆ ತೊಂದರೆ ಇಲ್ಲ. ಪೋಲೀಸರು 3 ವಾಹನಗಳ ಚಾಲಕರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ್ದಾರೆ ಅಂದರೆ ನಿಜ. ಟಾಟಾಏಸ್ ವಾಹನ ಚಾಲಕನಿಗೆ ವಾಹನ ಚಾಲನಾ ಪರವಾನಿಗೆ ಇರಲಿಲ್ಲ ಅಂದರೆ ನನಗೆ ಗೊತ್ತಿಲ್ಲ. ಅಪಘಾತವು ಟಾಟಾಏಸ್ ವಾಹನದ ಚಾಲಕನ ನಿರ್ಲಕ್ಷತನದಿಂದ ಸಂಭವಿಸಿಲ್ಲ ಅಂದರೆ ಸರಿಯಲ್ಲ. ಅಪಘಾತದ ಬಗ್ಗೆ ದೂರನ್ನು ನಾನೆ ಸಲ್ಲಿಸಿರುತ್ತೇನೆ. ಅಪಘಾತವು ಲಾರಿ ಚಾಲಕನ ನಿರ್ಲಕ್ಷತನದಿಂದ ಆಗಿರುತ್ತದೆ ಅಂದರೆ ನಿಜ. ಟಾಟಾಏಸ್ ವಾಹನ ಚಾಲಕನ ನಿರ್ಲಕ್ಷತೆ ಇರಲಿಲ್ಲ ಅಂದರೆ ಸರಿಯಲ್ಲ.

ನನ್ನ ಹೆಂಡತಿ ಕೂಲಿ ಕೆಲಸ ಮಾಡಲು ಹೋಗುತ್ತಿದ್ದಳು. ಫಿರ್ಯಾದಿಯಲ್ಲಿ ಗಾರ್ಮೆಂಟನಲ್ಲಿ ನನ್ನ ಹೆಂಡತಿ ಕೆಲಸ ಮಾಡಲು ಹೋಗುತ್ತಿದ್ದಳು ಎಂದು ನಮೂದಿಸಿದ್ದೇನೆ ಅಂದರೆ ನಿಜ. ಆದರೆ ಅಲ್ಲಿ ಕೂಲಿ ಕೆಲಸ ಮಾಡಲು ಹೋಗುತ್ತಿದ್ದಳು. ನನ್ನ ಹೆಂಡತಿಗೆ ತಿಂಗಳಿಗೆ ರೂ 25 ಸಾವಿರ ಸಂಬಳ ಇತ್ತು ಎನ್ನುವ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ. ನನ್ನ

ಹೆಂಡತಿ ಟೇಲರಿಂಗ್ ಕೆಲಸ ಮಾಡುತ್ತಿದ್ದಳು ಎಂದು ಎಲ್ಲಿಯೂ ಹೇಳಿಲ್ಲ ಅಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಹೆಂಡತಿಗೆ 35 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ 27 ವರ್ಷ ಎನ್ನುತ್ತಾರೆ. ನನ್ನ ಹೆಂಡತಿಯ ವಯಸ್ಸನ್ನು ದೃಡಿಪಡಿಸಲು ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ನಾನು ಹೊಲದಲ್ಲಿ ದುಡಿಯಲು ಹೋಗುತ್ತೇನೆ. ನನ್ನ ಹಾಗೂ ನನ್ನ ಹೆಂಡತಿಯ ಪಾನಕಾರ್ಡ, ಬ್ಯಾಂಕ ಪುಸ್ತಕಗಳು, ಆಧಾರ ಕಾರ್ಡ ಗಳನ್ನು ಹಾಜರ ಪಡಿಸಲು ಯಾವುದೆ ತೊಂದರೆ ಇಲ್ಲ. ಅಪಘಾತವು ಟಾಟಾಏಸ್ ವಾಹನ ಚಾಲಕನ ನಿರ್ಲಕ್ಷತನದಿಂದ ಆಗಿರುವುದಿಲ್ಲ ಆದ್ದರಿಂದ 4 ನೇ ಎದುರುದಾರ ಪರಿಹಾರ ನೀಡಲು ಭಾದ್ಯಸ್ಥರಲ್ಲ ಅಂದರೆ ಸರಿಯಲ್ಲ. 3 ನೇ ಎದುರುದಾರ ವಿಮಾ ಪಾಲಿಸಿ ನಿಯಮಗಳನ್ನು ಉಲ್ಲಂಘನೆ ಮಾಡಿರುವುದರಿಂದ 4 ನೇ ಎದುರುದಾರ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಅಂದರೆ ಸರಿಯಲ್ಲ. 4 ನೇ ಎದುರುದಾರ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.